# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಉಜ್ವಲ್ ಕುಮಾರ್ ಘೋಷ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಜೇವರ್ಗಿ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ ಉಪಲೋಕ್/ಜಿಎಲ್‌ಬಿ-5012/ಎಆರ್‌ಇ-5, ದಿನಾಂಕ: 30.11.2016

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ-5012/2013/ಎಆರ್‌ಇ-5, ದಿನಾಂಕ: 03.12.2016

****

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಕಲಬುರಗಿ ಜಿಲ್ಲಾ ಪಂಚಾಯತ್‌ನ ಜೇವರ್ಗಿ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಕುಕನೂರು ಗ್ರಾಮ ಪಂಚಾಯತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಗಳನ್ನು ಕುಕನೂರು ಗ್ರಾಮ ಪಂಚಾಯತಿ ಪ್ರದೇಶ ವ್ಯಾಪ್ತಿಯನ್ನು ಮೀರಿ ಅರಳಗುಂಡಿಗೆ ಗ್ರಾಮದ ಸರ್ವೆ ನಂ. 185, 186 ರಲ್ಲಿ ನಡೆಸಲಾಗಿರುತ್ತದೆಂದು, ಮತ್ತು ಕಾಮಗಾರಿಯನ್ನು ನಡೆಸಲು ಯಾವುದೇ ಯೋಜನೆ ರೂಪಿಸದೆ, ಅನುಮೋದನೆಯನ್ನು ಪಡೆಯದೇ, ಅದಾಗಲೇ ಮುಕ್ತಾಯಗೊಂಡ ಕಾಮಗಾರಿ ಯೋಜನೆಯಲ್ಲಿ ತೋರಿಸಿರುತ್ತಾರೆಂದು, ಆರೋಪಿತರು ಯಾವುದೇ ಕಾಮಗಾರಿಯನ್ನು ನಡೆಸದೆ ಹಣ ಖರ್ಚು ಮಾಡಲಾಗಿದೆಯೆಂದು ತೋರಿಸಿ ಅವ್ಯವಹಾರ ಮಾಡಿರುತ್ತಾರೆಂದು, ಯಾವುದೇ ದಾಖಲೆಗಳನ್ನು ನಿರ್ವಹಿಸದೆ ಹಣವನ್ನು ಖರ್ಚು ಮಾಡಲಾಗಿದೆಯೆಂದು, ಕೆಲಸ ಮಾಡದೆ ಇರುವಂತಹ ಕೂಲಿಕಾರ್ಮಿಕರ ಹೆಸರಿನಲ್ಲಿ ಕೂಲಿ ನೀಡಿ,

ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಈ ಕೆಳಕಂಡ ಅಧಿಕಾರಿ/ನೌಕರರು ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂದು ಅರೋಪಿಸಿ, ಕುಕನೂರು ಗ್ರಾಮದ ನಿವಾಸಿಯಾದ ಶ್ರೀ ಮಹಾದೇವಪ್ಪ, ತಂದೆ ಶ್ರೀಪತಿರಾಯ ಚನ್ನಮಲ್ಲಪ್ಪಗೋಳ, ಜೇವರಗಿ ತಾಲ್ಲೂಕು ಇವರು ನೀಡಿದ್ದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರನ್ವಯ ತನಿಖೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಅಧ್ಯಕ್ಷರು,<br>ಗ್ರಾಮ ಪಂಚಾಯತಿ ಕುಕನೂರು | 1 |
| 2 | ಕಾರ್ಯದರ್ಶಿ,<br>ಕುಕನೂರು ಗ್ರಾಮ ಪಂಚಾಯತಿ | 2 |
| 3 | ಪಂಚಾಯತಿ ಅಭಿವೃದ್ಧಿ ಅಧಿಕಾರಿ,<br>ಕುಕನೂರು ಗ್ರಾಮ ಪಂಚಾಯಿತಿ | 3 |
| 4 | ಶ್ರೀ . ಕಿರಿಯ ಅಭಿಯಂತರರು,<br>ಜೇವರ್ಗಿ ತಾಲ್ಲೂಕು | 4 |
| 5 | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜೇವರ್ಗಿ ತಾಲ್ಲೂಕು ಪಂಚಾಯತ್. | 5 |
| 6 | ಕಾರ್ಯನಿರ್ವಾಹಕ ಅಧಿಕಾರಿ,<br>ತಾಲ್ಲೂಕು ಪಂಚಾಯತ್ ಜೇವರ್ಗಿ. | 6 |

ಸದರಿ ಅವಧಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ ಅಧಿಕಾರಿ/ನೌಕರರನ್ನು ಎದುರುದಾರರು 7 ರಿಂದ 18 ಎಂದು ನಮೂದಿಸಲಾಗಿರುತ್ತದೆಂದು ವರದಿಸಿರುತ್ತಾರೆ.

ದೂರುದಾರರ ದೂರಿನ ಬಗ್ಗೆ ಎದುರುದಾರರಿಗೆ ಕಳುಹಿಸಿ ತಮ್ಮ ಉತ್ತರವನ್ನು ನೀಡುವಂತೆ ಸೂಚಿಸಲಾಗಿದ್ದು, ಇದಕ್ಕೆ ಪ್ರತಿಕ್ರಿಯೆಯಾಗಿ ಎದುರುದಾರರು 3, 6 ರಿಂದ 9 ಮತ್ತು 16 ರವರುಗಳು ಉತ್ತರವನ್ನು ಸಲ್ಲಿಸಿರುತ್ತಾರೆಂದು ಎದುರುದಾರರು 1, 2, 4, 5, 10, 12 ರಿಂದ 15 ಮತ್ತು 17 ರವರುಗಳು ಉತ್ತರವನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸುತ್ತಾ, ಎದುರುದಾರರು 6 ಮತ್ತು 11 ಒಬ್ಬರೆ ಆಗಿರುತ್ತಾರೆಂದು, ಎದುರುದಾರರು 2 ಮತ್ತು 17 ಒಬ್ಬರೆ ಆಗಿರುತ್ತಾರೆಂದು, ಹಾಗೂ ಎದುರುದಾರರು 9 ಮತ್ತು 18 ಒಂದೇ ಆಗಿರುತ್ತಾರೆಂದು ವರದಿಸಿರುತ್ತಾರೆ.

ಎದುರುದಾರರು ಉತ್ತರವನ್ನು ಸಲ್ಲಿಸಿ ವಿಚಾರಣಾ ವರದಿಯಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆಂದು, ಎದುರುದಾರರು-3 ಮತ್ತು 16 ರವರು ಕಾಮಗಾರಿ ನಡೆದ ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು, ಮತ್ತು ಎದುರುದಾರರು 6 (6 ಮತ್ತು 11 ಒಬ್ಬರೇ) ಮತ್ತು ಎದುರುದಾರರು 7, 8 ಮತ್ತು 12 ಇವರುಗಳು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆಂದು, ತಿಳಿಸುತ್ತಾ, ಎದುರುದಾರರು 3, 16, 6, 11 (6,11 ಒಬ್ಬರೆ) 7, 8, 12, ಇವರುಗಳಿಗೆ ಸಂಬಂಧಿಸಿದಂತೆ ತನಿಖಾ ವರದಿಯಲ್ಲಿ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಎದುರುದಾರರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ, ಮಾನ್ಯ ಉಪಲೋಕಾಯುಕ್ತರು ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ಅಪರ ನಿಬಂಧಕರು, ರವರು ಕೋರಿರುತ್ತಾರೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಬಾಬುಗೌಡ,<br>ಕಾರ್ಯದರ್ಶಿ,<br>ಕುಕನೂರು ಗ್ರಾಮಪಂಚಾಯತಿ. | 2 |
| 2 | ಶ್ರೀ ಪ್ರಭುಲಿಂಗ,<br>ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯತ್ ಜೇವರ್ಗಿ. | 4 |
| 3 | ಶ್ರೀ ಎಂ.ಬಿ.ಬಿರಾದಾರ,<br>ಸಹಾಯಕ ಕಾರ್ಯಪಲಕ ಇಂಜಿನೀಯರ್, ತಾಲ್ಲೂಕು ಪಂಚಾಯತ್ ಜೇವರ್ಗಿ, | 5 |

| | | |
|---|---|---|
| 4 | ಶ್ರೀ ಸಮಧ ಪಟೇಲ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಜೇವರ್ಗಿ, | 9 |
| 4 | ಶ್ರೀ ಉಜ್ವಲ್ ಕುಮಾರ್ ಘೋಷ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಜೇವರ್ಗಿ, | 10 |
| 5 | ಶ್ರೀ ನಬಿಲಾಲ್, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕುಕನೂರು ಗ್ರಾಮ ಪಂಚಾಯತಿ, | 13 |
| 6 | ಶ್ರೀ ಶರಣಪ್ಪ ಸಜ್ಜನ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕುಕನೂರು ಗ್ರಾಮ ಪಂಚಾಯತಿ. | 14 |
| 7 | ಶ್ರೀ ನಾಗೇಂದ್ರಪ್ಪ ಕುಡಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕುಕನೂರು ಗ್ರಾಮ ಪಂಚಾಯತಿ. | 15 |

ಎದುರುದಾರರು-1 ರವರಾದ ಶ್ರೀಮತಿ ಶ್ರೀದೇವಿ. ನಾಗಪ್ಪ ಗೋಲ್ಲಾಳಪ್ಪ, ಅಧ್ಯಕ್ಷರು ಕುಕನೂರು ಗ್ರಾಮ ಪಂಚಾಯತಿ ಇವರ ವಿರುದ್ಧ ಪಂಚಾಯತ್ ರಾಜ್ ಕಾಯ್ದೆಯನ್ವಯ ಕ್ರಮ ಕೈಗೊಳ್ಳುವಂತೆಯೂ ಸಹ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಶಿಫಾರಸ್ಸು ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 1, 2, 4, 5, 9, 10, ಮತ್ತು 13 ರವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅಧಿಕಾರೇತರರಾದ ಎದುರುದಾರರು-1 ರವರಾದ ಶ್ರೀಮತಿ ಶ್ರೀದೇವಿ. ನಾಗಪ್ಪ ಗೋಲ್ಲಾಳಪ್ಪ, ಅಧ್ಯಕ್ಷರು ಕುಕನೂರು ಗ್ರಾಮ ಪಂಚಾಯತಿ ಇವರ ವಿರುದ್ಧ ಪಂಚಾಯತ್ ರಾಜ್ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಇತರೆ ದಾಖಲಾತಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ನಿರ್ದೇಶಕರು ಪಂ.ರಾಜ್-1 ಇವರಿಗೆ ದಿನಾಂಕ: 18.01.2017ರ ಅ.ಟಿ.ಯಲ್ಲಿ ಕೋರಲಾಗಿರುತ್ತದೆ.

ಮಾನ್ಯ ಉಪ ಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಎದುರುದಾರರು 2, 4, 5, 9, 10, ಮತ್ತು 13 ರವರುಗಳು ವಿರುದ್ಧದ ಆರೋಪಗಳ ಸಂಬಂಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 271 ವಿಸೇಬಿ 2016 ಬೆಂಗಳೂರು ದಿನಾಂಕ:18-01-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಬಾಬುಗೌಡ, ಕಾರ್ಯದರ್ಶಿ, ಕುಕನೂರು ಗ್ರಾಮಪಂಚಾಯತಿ. | 2 |
| 2 | ಶ್ರೀ ಪ್ರಭುಲಿಂಗ, ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯತ್ ಜೇವರ್ಗಿ. | 4 |
| 3 | ಶ್ರೀ ಎಂ.ಬಿ.ಬಿರಾದಾರ, ಸಹಾಯಕ ಕಾರ್ಯಪಾಲಕ ಇಂಜಿನೀಯರ್, ತಾಲ್ಲೂಕು ಪಂಚಾಯತ್ ಜೇವರ್ಗಿ, | 5 |
| 4 | ಶ್ರೀ ಸಮಥ ಪಟೇಲ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಜೇವರ್ಗಿ, | 9. |
| 4 | ಶ್ರೀ ಉಜ್ವಲ್ ಕುಮಾರ್ ಘೋಷ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಜೇವರ್ಗಿ. | 10 |

| | | |
|---|---|---|
| 5 | ಶ್ರೀ ನಬೆಲಾಲ್, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕುಕನೂರು ಗ್ರಾಮ ಪಂಚಾಯತಿ. | 13 |
| 6 | ಶ್ರೀ ಶರಣಪ್ಪ ಸಜ್ಜನ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕುಕನೂರು ಗ್ರಾಮ ಪಂಚಾಯತಿ. | 14 |
| 7 | ಶ್ರೀ ನಾಗೇಂದ್ರಪ್ಪ ಕುಡಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕುಕನೂರು ಗ್ರಾಮ ಪಂಚಾಯತಿ. | 15 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

18/01/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಕಲಬುರಗಿ.
4) ನಿಬಂಧಕರು, ವಿಚಾರಣೆ-5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.